ಸೆಪ್ಟಂಬರ್ 19	.. .. ..	ಅನಂತಚತುರ್ದಶಿ
ಅಕ್ಟೋಬರ್ 5	.. .. ..	ಮಹಾಲಯ ಅಮಾವಾಸ್ಯೆ
ಸದರೀ 6	.. .. ..	ನವರಾತ್ರೀ ಆರಂಭ ದಿವಸ
ಸದರೀ 11ರಿಂದ 20ರ ವರಿಗೆ ಉಭಯ ದಿವಸಗಳೂ ಸೇರಿ	..	ದಸರಾ ರಜಾ
ನವಂಬರ್ 3	.. .. ..	ದೀಪಾವಳಿ
ಸದರೀ 9	.. .. ..	ಪ್ರಿನ್ಸಿಆಫ್‌ವೇಲ್ಸ್‌ರವರ ಜನ್ಮದಿವಸ
ಡಿಶಂಬರ್ 24ರಿಂದ 31ರ ವರಿಗೆ ಉಭಯ ದಿವಸಗಳೂ ಸೇರಿ		ಕ್ರಿಸ್‌ಮಸ್ ರಜಾ

ಈ ವರ್ಷದಲ್ಲಿ ಬರುವ ಸಮಸ್ತ ಭಾನುವಾರಗಳೂ—

ವಿಶೇಷ ವಿಷಯ—ಶ್ರೀಮಂ ಮಹಾರಾಜರವರ ರಾಜ್ಯಾಭಿಷೇಕದ ದಿವಸ, ವಿನಾಯಕ ಚತುರ್ಥೀ ಮತ್ತು ಬಲಿಪಾಡ್ಯಮಿ ಹಬ್ಬಗಳು ಇವು ಭಾನುವಾರದ ದಿವಸ ಬರುವ ಕಾರಣ, ಇಲ್ಲಿ ಸೇರಿಸಿಲ್ಲ.

ಯುಗಾದೀ ಹಬ್ಬ, ಶ್ರೀರಾಮ ನವಮಿ, ಅರ್ಧಪ್ರಡೆ, ಇವುಗಳು ಪ್ರತಿ ವರ್ಷವೂ ಬರುವ ವಿರಾಮದ ರಜಾದಲ್ಲಿ ಸಂಭವಿಸುವ ಕಾರಣ ಇಲ್ಲಿ ಸೇರಿಸಿಲ್ಲ.

ಅಪ್ಪಣೇ ಪ್ರಕಾರ,

ಎಲ್. ಅನಂತಸ್ವಾಮಿರಾವ್,
ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮಾ.

ತಾರೀಖು 13ನೇ ಡಿಶಂಬರ್ 1887.

ಸ್ಯ 1886ನೇ ಇಸವಿ ಏಪ್ರಿಲ್ ಮಾಹೆ 24ನೇ ತಾರೀಖಿನ ಮೈಸೂರ ಗೆಜೆಟ್‌ನಲ್ಲಿ ಫಾಮಿಷ್ ಮಾಡಿರುವ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಅದೇ ಮಾಹೆ 19ನೇ ಮರ್ಕುಮಿನ ಇಸ್ತಿಹಾರ್ ಪ್ರಕಾರ ಮೈಸೂರು ಕೀಮೆ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ ಹುಕ್ಕುಂ ಅನುಸರಿಸಿ ಇದರಿಂದ ಪ್ರಕಟಿಸುವದೇನಂದರೆ, ಇದುವರಿವಿಗೆ 2ನೇ ತರಗತಿಯ ಬಂಗ್ಲೆಯಂತೆ ಉಪಯೋಗಿಸುತ್ತಿದ್ದ ದೇವರಾಯದುರ್ಗ ಸ್ಟೇಟ್ ಫಾರೆಸ್ಟಿನಲ್ಲಿರುವ ಫಾರೆಸ್ಟು ಲಾಡ್ಜ್‌ಗೆ ಐಯಿಂದ ಪ್ರಯಾಣಸ್ತರಾಗಲಿ ಆಥವಾ ಷಿಕಾರೀ ಜನಗಳಾಗಲಿ ಉಪಯೋಗಿಸಲು ಅವಕಾಶ ವಿರುವದಿಲ್ಲ.

ಎಂ. ಆನ್ನಾಜೀರಾವ್,
ಫಾರ್ ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 576.

ಮೃತಪಟ್ಟ ಜಗನ್ನಾಥನಾಯಿಡೂ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವರದರಾಜುಲು ನಾಯಿಡೂಯವರು ಮೃತಪಟ್ಟಸದರೀ ಜಗನ್ನಾಥನಾಯಡೂ ಯವರಿಗೆ ಯರಡನೇ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ದೇವರಾಜಮೊಹಲ್ಲಾ ಸ್ಥಳದ ಸದರೀ ವರದರಾಜುಲುನಾಯಡೂ ಯವರು ಸದರೀ ವಾಸಸ್ಥನಾಗಿ ಮೃತಪಟ್ಟ ಜಗನ್ನಾಥನಾಯಿಡೂ ಯವರ ಜಿಂದಗೀ ಬಗ್ಯಾಗಿ ಬರತಕ್ಕ 3200 ರೂಪಾಯಿ ಸಾಲಗಳನ್ನು ಸಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವರದರಾಜುಲು ನಾಯಿಡೂಯವರ ಅರ್ಜೀಯನ್ನು 1888ನೇ ಇಸವಿ ಜನವರೀ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಗನ್ನಾಥ ನಾಯಿಡೂ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಡಿಶಂಬರ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸೀ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.